# ಪಡಿ, ಮಂಗಳೂರು

# ಸರಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣಕ್ಕಾಗಿ ಸಶಕ್ತ ಶಾಲಾಭಿವೃದ್ಧಿ ಸಮಿತಿ ಯೋಜನೆ

# 2020-2021 ಮೌಲ್ಯಮಾಪನಾ ಸಾಧನ

ದಿನಾಂಕ: ಮೌಲ್ಯಮಾಪನ ನಡೆಸುವವರು

| ಗ್ರೇಡ್ | ನಿರೀಕ್ಷಿತ ಅಂಕಗಳು | ಸೂಚ್ಯಂಕ ಮಾಪನಾಂಶ | ನಿಗದಿಸಿದ ಅಂಕ |
|---|---|---|---|
| ಅತ್ಯುತ್ತಮ | **85 to 114** | **a** | **6** |
| ಉತ್ತಮ | **56 to 84** | **b** | **4** |
| ತೃಪ್ತಿಕರ | **29 to 55** | **c** | **2** |
| ಅತೃಪ್ತಿಕರ | **Below 28** | **d** | **0** |

| ಕ್ರ. ಸಂ | ಸೂಚ್ಯಂಕಗಳು ಮತ್ತು ಮಾಪನಾಂಶಗಳು | ಪ್ರತಿಕ್ರಿಯೆ | |
|---|---|---|---|
| | | √ ಗುರುತು ಹಾಕಿ | ವಿವರಣೆ ಅಗತ್ಯವಿದ್ದಲ್ಲಿ |
| 5.1 | **ನಿಮ್ಮ ಶಾಲೆಯ ಎಸ್‌ಡಿಎಂಸಿಯ ಮಾಸಿಕ ಸಭೆಗಳು ಸರ್ವ ಸದಸ್ಯರ ಭಾಗವಹಿಸುವಿಕೆಯಲ್ಲಿ ನಡೆಯುತ್ತದೆ.** | | |
| a | ಸಭೆ ಕೋರಂ ಇದ್ದು ನಡೆಯುತ್ತಿದೆ. | | |
| b | ಶೇಕಡಾ 50ಕ್ಕಿಂತ ಹೆಚ್ಚು ಸದಸ್ಯರ ಭಾಗವಹಿಸುವಿಕೆಯಲ್ಲಿ ನಡೆಯುತ್ತಿದೆ. | | |
| c | ಶೇಕಡಾ 50ಕ್ಕಿಂತ ಕಡಿಮೆ ಸದಸ್ಯರ ಭಾಗವಹಿಸುವಿಕೆಯಲ್ಲಿ ನಡೆಯುತ್ತಿದೆ. | | |
| d | ಕೆಲವೇ ಸದಸ್ಯರ ಭಾಗವಹಿಸುವಿಕೆಯಲ್ಲಿ ಎಸ್‌ಡಿಎಂಸಿ ಸಭೆಗಳು ನಡೆಯುತ್ತಿದೆ. | | |
| 5.2. | **ಸಮುದಾಯ ಭಾಗವಹಿಸುವಿಕೆಯ ಮೂಲಕ 3 ವರ್ಷ ಅವಧಿಗಾಗಿ ಶಾಲಾಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು** | | |
| a | ಮುಖ್ಯೋಪಾಧ್ಯಾಯರು, ಶಿಕ್ಷಕ/ಕಿಯರು, ಎಸ್‌ಡಿಎಂಸಿ ಸದಸ್ಯರು, ಮಕ್ಕಳು, ಪೋಷಕರು, ಸ್ಥಳೀಯ ಪ್ರಾಧಿಕಾರ, ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳು, ಅಂಗನವಾಡಿ ಶಿಕ್ಷಕಿ, ದಾನಿಗಳನ್ನು ಸೇರಿಸಿ, ಶಾಲಾಭಿವೃದ್ಧಿ ಯೋಜನೆಯನ್ನು ತಯಾರುಗೊಳಿಸಲಾಗಿದೆ. | | |
| b | ಮುಖ್ಯೋಪಾಧ್ಯಾಯರು, ಶಿಕ್ಷಕ/ಕಿಯರು, ಎಸ್‌ಡಿಎಂಸಿ ಸದಸ್ಯರು, ಮತ್ತು ಮಕ್ಕಳನ್ನು ಸೇರಿಸಿ, ಶಾಲಾಭಿವೃದ್ಧಿ ಯೋಜನೆಯನ್ನು ತಯಾರುಗೊಳಿಸಲಾಗಿದೆ. | | |
| c | ಮುಖ್ಯೋಪಾಧ್ಯಾಯರು ಮತ್ತು ಎಸ್‌ಡಿಎಂಸಿ ಸದಸ್ಯರನ್ನು ಸೇರಿಸಿ, ಶಾಲಾಭಿವೃದ್ಧಿ ಯೋಜನೆಯನ್ನು ತಯಾರುಗೊಳಿಸಲಾಗಿದೆ. | | |
| d | ಮುಖ್ಯೋಪಾಧ್ಯಾಯರಿಂದ ಶಾಲಾಭಿವೃದ್ಧಿ ಯೋಜನೆಯನ್ನು ತಯಾರುಗೊಳಿಸಲಾಗಿದೆ. | | |

| ಕ್ರ. ಸಂ | ಸೂಚ್ಯಂಕಗಳು ಮತ್ತು ಮಾಪನಾಂಶಗಳು | ಪ್ರತಿಕ್ರಿಯೆ | |
|---|---|---|---|
| | | √ ಗುರುತು ಹಾಕಿ | ವಿವರಣೆ ಅಗತ್ಯವಿದ್ದಲ್ಲಿ |
| 5.3. | **ಶಾಲಾಭಿವೃದ್ಧಿ ಯೋಜನೆಯ ಪ್ರಸ್ತಾಪ ಎಸ್‌ಡಿಎಂಸಿ ಸಭೆಯಲ್ಲಿ ಮುಖ್ಯ ಕಾರ್ಯಸೂಚಿಯಾಗಿದೆ.** | | |
| a | ಪ್ರತೀ ತಿಂಗಳೂ ಶಾಲಾಭಿವೃದ್ಧಿ ಯೋಜನೆಯ ಪ್ರಸ್ತಾಪವನ್ನು ತಿಂಗಳ ಸಭೆಯಲ್ಲಿ ಚರ್ಚಿಸಿ ಅನುಸರಣೆ ಮಾಡಲಾಗುತ್ತಿದೆ. | | |
| b | ಪ್ರತೀ ತಿಂಗಳೂ ಶಾಲಾಭಿವೃದ್ಧಿ ಯೋಜನೆಯ ಪ್ರಸ್ತಾಪವನ್ನು ತಿಂಗಳ ಸಭೆಯಲ್ಲಿ ಚರ್ಚಿಸಲಾಗುತ್ತದೆ ಆದರೆ ಅನುಸರಣೆ ಕ್ರಮಬದ್ಧವಾಗಿಲ್ಲ | | |
| c | ಕೆಲವೊಂದು ಸಭೆಗಳಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ | | |
| d | ಶಾಲಾಭಿವೃದ್ಧಿ ಯೋಜನೆಯು ತಿಂಗಳ ಸಭೆಯಲ್ಲಿ ಕಾರ್ಯಸೂಚಿಯಲ್ಲೂ ಇಲ್ಲ ಹಾಗೂ ಈ ಬಗ್ಗೆ ಚರ್ಚೆಗಳಾಗುವುದಿಲ್ಲ | | |
| 5.4. | **3 ವರ್ಷಗಳ ಶಾಲಾಭಿವೃದ್ಧಿ ಯೋಜನೆಯ ಪರಿಷ್ಕರಣೆ** | | |
| a | 3 ವರ್ಷಗಳ ಶಾಲಾಭಿವೃದ್ಧಿ ಯೋಜನೆಯ ಆಧಾರದಲ್ಲಿ ವಾರ್ಷಿಕ ಯೋಜನೆಯಾಗಿ ವಿಕೇಂದ್ರೀಕರಿಸಿ, 6 ತಿಂಗಳಿಗೊಮ್ಮೆ ಪರಿಷ್ಕರಿಸಿ ಅನುಸರಣೆ ಮಾಡಲಾಗುತ್ತಿದೆ. | | |
| b | 3 ವರ್ಷಗಳ ಶಾಲಾಭಿವೃದ್ಧಿ ಯೋಜನೆಯ ಆಧಾರದಲ್ಲಿ ವಾರ್ಷಿಕ ಯೋಜನೆಯಾಗಿ ವಿಕೇಂದ್ರೀಕರಿಸಿ, 1 ವರ್ಷಕ್ಕೊಮ್ಮೆ ಪರಿಷ್ಕರಿಸಿ ಅನುಸರಣೆ ಮಾಡಲಾಗುತ್ತಿದೆ | | |
| c | ಶಾಲಾಭಿವೃದ್ಧಿ ಯೋಜನೆಯನ್ನು ವರ್ಷಕ್ಕೊಮ್ಮೆ ತಯಾರಿಸಿ ಪರಿಶೀಲಿಸಲಾಗುತ್ತಿದೆ. | | |
| d | ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಿಯೇ ಇಲ್ಲ | | |
| 5.5. | **ಶಿಕ್ಷಣ ಹಕ್ಕು ಕಾಯಿದೆ(RTE)ಯಲ್ಲಿರುವಂತೆ ಶಾಲಾಭಿವೃದ್ಧಿಗೆ ಸಂಬಂಧಿಸಿದ ಜವಾಬ್ದಾರಿಗಳ ಅನುಸರಣೆಗಳನ್ನು ಎಸ್‌ಡಿಎಂಸಿ ತೆಗೆದುಕೊಳ್ಳುತ್ತಿದೆ.** | | |
| a | ಎಸ್‌ಡಿಎಂಸಿಯು ಶಾಲಾಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಆರ್ಥಿಕ ಸಂಪನ್ಮೂಲಗಳನ್ನು ಶಿಕ್ಷಣ ಇಲಾಖೆ, ಸ್ಥಳೀಯ ಸರಕಾರ, ಸಮುದಾಯದಿಂದಲೂ ಕೂಡಾ ಕ್ರೋಢೀಕರಿಸಿ ಸಮರ್ಪಕವಾಗಿ ಬಳಕೆ ಮಾಡಿ ಕಾರ್ಯತಂತ್ರವನ್ನು ಯಶಸ್ವಿಕೃತಗೊಳಿಸುತ್ತಿದೆ. | | |
| b | ಎಸ್‌ಡಿಎಂಸಿಯು ಶಾಲಾಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಆರ್ಥಿಕ ಸಂಪನ್ಮೂಲಗಳನ್ನು ಸ್ಥಳೀಯ ಸರಕಾರ ಮತ್ತು ಸಮುದಾಯದಿಂದ ಕ್ರೋಢೀಕರಿಸಿ ಕಾರ್ಯತಂತ್ರಕ್ಕಾಗಿ ಬಳಕೆ ಮಾಡುತ್ತಿದೆ. | | |
| c | ಎಸ್‌ಡಿಎಂಸಿಯು ಶಾಲಾಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಆರ್ಥಿಕ ಸಂಪನ್ಮೂಲಗಳನ್ನು ಸ್ಥಳೀಯ ಸರಕಾರ ಅಥವಾ ಸಮುದಾಯದಿಂದ ಕ್ರೋಢೀಕರಿಸಿ ಬಳಕೆ ಮಾಡುತ್ತಿದೆ. | | |
| d | ಈ ವರೆಗೆ ಯಾವುದೇ ಸಂಪನ್ಮೂಲಗಳನ್ನು ಪಡೆಯಲು ಪ್ರಯತ್ನಿಸಿಲ್ಲ. | | |
| 5.6. | **ಶಿಕ್ಷಣ ಹಕ್ಕು ಕಾಯಿದೆ(RTE)ಯ ಅನುಷ್ಠಾನದ ಪ್ರಕ್ರಿಯೆಯಲ್ಲಿ ಮಹಿಳಾ ಸದಸ್ಯರ ಭಾಗವಹಿಸುವಿಕೆ- ಗ್ರಾಮ/ತಾಲೂಕು/ ಜಿಲ್ಲಾ ಪಂಚಾಯತ್ ಹಾಗೂ ಶಿಕ್ಷಣ ಇಲಾಖೆ ಮತ್ತು ದಾನಿಗಳೊಂದಿಗೆ ಸಂಪರ್ಕ, ವಕಾಲತು ಇತ್ಯಾದಿ,** | | |
| a | ಶೇಕಡಾ 50ಕ್ಕೂ ಹೆಚ್ಚು ಮಹಿಳಾ ಸದಸ್ಯರ ಭಾಗವಹಿಸುವಿಕೆ | | |
| b | ಶೇಕಡಾ 50ಕ್ಕಿಂತ ಕಡಿಮೆ ಮಹಿಳಾ ಸದಸ್ಯರ ಭಾಗವಹಿಸುವಿಕೆ | | |
| c | ಶೇಕಡಾ 30ಕ್ಕಿಂತ ಕಡಿಮೆ ಮಹಿಳಾ ಸದಸ್ಯರ ಭಾಗವಹಿಸುವಿಕೆ | | |
| d | ಮಹಿಳಾ ಸದಸ್ಯರ ಯಾವುದೇ ಭಾಗವಹಿಸುವಿಕೆ ಇರುವುದಿಲ್ಲ | | |

| ಕ್ರ. ಸಂ | ಸೂಚ್ಯಂಕಗಳು ಮತ್ತು ಮಾಪನಾಂಶಗಳು | ಪ್ರತಿಕ್ರಿಯೆ | |
|---|---|---|---|
| | | √ ಗುರುತು ಹಾಕಿ | ವಿವರಣೆ ಅಗತ್ಯವಿದ್ದಲ್ಲಿ |
| 5.7 | **ಮಗುಸ್ನೇಹಿ ಶಾಲಾ ಕಟ್ಟಡ ಮತ್ತು ತರಗತಿ ಕೋಣೆಗಳು** | | |
| a | ತರಗತಿಗನುಗುಣವಾಗಿ ತರಗತಿ ಕೋಣೆಗಳಲ್ಲಿ ಮಗುಸ್ನೇಹಿ ಡೆಸ್ಕ್, ಬೆಂಚ್, ಬ್ಲ್ಯಾಕ್‌ಬೋರ್ಡ್ ಎಲ್ಲಾ ಸೌಲಭ್ಯಗಳನ್ನು ಮಾಡಲಾಗಿದೆ. | | |
| b | ತರಗತಿಗನುಗುಣವಾಗಿ ತರಗತಿ ಕೋಣೆಗಳಿದ್ದು ಸೌಲಭ್ಯಗಳು ಮಗುಸ್ನೇಹಿಯಾಗಿಲ್ಲ | | |
| c | ತರಗತಿಗನುಗುಣವಾಗಿ ತರಗತಿ ಕೋಣೆಗಳಿದ್ದು ಯಾವುದೇ ಸೌಲಭ್ಯಗಳು ಇಲ್ಲ | | |
| d | ತರಗತಿಗನುಗುಣವಾಗಿ ತರಗತಿ ಕೋಣೆಗಳಿರುವುದಿಲ್ಲ | | |
| 5.8 | **ಎಲ್ಲಾ ಕಾಲದಲ್ಲೂ ಶುದ್ಧ ಕುಡಿಯುವ ನೀರಿನ ಸೌಲಭ್ಯ** | | |
| a | ಪ್ರತೀ ತರಗತಿ ಕೋಣೆಗಳಲ್ಲಿ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ | | |
| b | ಸಾಮಾನ್ಯ ಒಂದು ಸ್ಥಳದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ | | |
| c | ಸಾಮಾನ್ಯ ಕುಡಿಯುವ ನೀರಿನ ವ್ಯವಸ್ಥೆ ಇದೆ | | |
| d | ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿಲ್ಲ. | | |
| 5.9. | **ಹುಡುಗರು ಹಾಗೂ ಹುಡುಗಿಯರಿಗೆ ಪ್ರತ್ಯೇಕವಾಗಿ ಉಪಯೋಗಿಸಲು ಸೂಕ್ತ ಕಾರ್ಯಾಚರಿಸುವ ಶೌಚಾಲಯದ ವ್ಯವಸ್ಥೆ** | | |
| a | ಪ್ರತ್ಯೇಕ ಹಾಗೂ ಸಾಕಷ್ಟು ನೀರಿನ ವ್ಯವಸ್ಥೆಯೊಂದಿಗೆ ಕಾರ್ಯಾಚರಿಸುವ ಶೌಚಾಲಯದ ವ್ಯವಸ್ಥೆ ಇದೆ | | |
| b | ಹುಡುಗರಿಗೆ ಮೂತ್ರಾಲಯ ಹಾಗೂ ಹುಡುಗಿಯರಿಗೆ ಶೌಚಾಲಯ ವ್ಯವಸ್ಥೆ ಇರುವುದು | | |
| c | ಹುಡುಗರಿಗೆ ಮತ್ತು ಹುಡುಗಿಯರಿಗೆ ಶೌಚಾಲಯ ಅಥವಾ ಮೂತ್ರಾಲಯವಿದ್ದು ಬಳಕೆಯಾಗುತ್ತಿಲ್ಲ | | |
| d | ಮೇಲೆ ತಿಳಿಸಿದ ಯಾವುದೇ ಸವಲತ್ತು ಇರುವುದಿಲ್ಲ. | | |
| 5.10. | **ಶೌಚಾಲಯದ ನೈರ್ಮಲೀಕರಣ (ಹೈಜೀನ್/ಸ್ಯಾನಿಟರಿ) ಕುರಿತಾದ ವ್ಯವಸ್ಥೆಗಳು ಮತ್ತು ಬಳಕೆ** | | |
| a | ಸೋಪ್/ಸೋಪ್ ಆಯಿಲ್, ಫಿನಾಯಿಲ್ ಮತ್ತು ಬ್ರಶ್, ವ್ಯವಸ್ಥೆಗಳು ಸಮರ್ಪಕವಾಗಿದ್ದು ಶೌಚಾಲಯ ಶುಚಿತ್ವಕ್ಕೆ ಬಳಕೆಯಾಗುತ್ತಿವೆ. | | |
| b | ಕೇವಲ ಬ್ರಶ್ ವ್ಯವಸ್ಥೆಗಳು ಇದ್ದು ಶೌಚಾಲಯ ಶುಚಿತ್ವಕ್ಕೆ ಬಳಕೆಯಾಗುತ್ತಿವೆ. | | |
| c | ಸೋಪ್, ಫಿನಾಯಿಲ್ ಮತ್ತು ಬ್ರಶ್, ವ್ಯವಸ್ಥೆ ಇದ್ದರೂ ಶೌಚಾಲಯ ಶುಚಿತ್ವಕ್ಕೆ ಬಳಕೆಯಾಗುತ್ತಿಲ್ಲ | | |
| d | ಶೌಚಾಲಯದ ನೈರ್ಮಲೀಕರಣದ ಯಾವುದೇ ವ್ಯವಸ್ಥೆಗಳಿಲ್ಲ | | |
| 5.11. | **ಮಕ್ಕಳ ಆರೋಗ್ಯ ದೃಷ್ಟಿಯಿಂದ ವ್ಯವಸ್ಥಿತ ಆಟೋಟ ಸಾಮಗ್ರಿಗಳು ಮತ್ತು ಆಟದ ಮೈದಾನದ ಸೌಲಭ್ಯ** | | |
| a | ಉತ್ತಮ ಆಟದ ಮೈದಾನ ಮತ್ತು ಅತ್ಯಾಧುನಿಕ ಆಟೋಟ ಸಾಮಗ್ರಿಗಳನ್ನು ಮಕ್ಕಳಿಗೆ ಒದಗಿಸಲಾಗುತ್ತಿದೆ. | | |
| b | ಉತ್ತಮ ಆಟದ ಮೈದಾನವಿದ್ದು ಸಾಕಷ್ಟು ಆಟದ ಸಾಮಗ್ರಿಗಳ ವ್ಯವಸ್ಥೆ ಇಲ್ಲ | | |
| c | ಆಟದ ಸಾಮಗ್ರಿಗಳು ಇವೆ ಆದರೆ, ಆಟದ ಮೈದಾನವು ಮಕ್ಕಳಿಗೆ ಆಡಲು ಯೋಗ್ಯವಾಗಿಲ್ಲ | | |
| d | ಆಟದ ಮೈದಾನ ಇರುವುದಿಲ್ಲ | | |

| ಕ್ರ. ಸಂ | ಸೂಚ್ಯಂಕಗಳು ಮತ್ತು ಮಾಪನಾಂಶಗಳು | ಪ್ರತಿಕ್ರಿಯೆ | |
|---|---|---|---|
| | | √ ಗುರುತು ಹಾಕಿ | ವಿವರಣೆ ಅಗತ್ಯವಿದ್ದಲ್ಲಿ |
| 5.12. | **ಶಾಲಾ ಮಕ್ಕಳ ಸುರಕ್ಷೆ, ಶಾಲಾ ಆಸ್ತಿ, ಶಾಲೆಯ ಉದ್ಯಾನ ಮತ್ತು ಕೈತೋಟಗಳ ಸಂರಕ್ಷಣೆಗಾಗಿ ಶಾಲಾ ಆವರಣ ಗೋಡೆ** | | |
| a | ಶಾಲಾ 4 ಸುತ್ತಲೂ ಆವರಣ ಗೋಡೆ ಇದ್ದು ಗೇಟ್ ಮಾಡಲಾಗಿದೆ. | | |
| b | ಶಾಲೆಯ 3 ಸುತ್ತ ಆವರಣ ಗೋಡೆ ನಿರ್ಮಿಸಲಾಗಿದ್ದು ಗೇಟ್ ವ್ಯವಸ್ಥೆ ಇರುವುದಿಲ್ಲ | | |
| c | ಶಾಲೆಗೆ ಗಿಡಬಳ್ಳಿ/ತಂತಿ ಬೇಲಿಯನ್ನು ಹಾಕಲಾಗಿದೆ. | | |
| d | ಮೇಲೆ ತಿಳಿಸಿದ ಯಾವುದೆ ರಕ್ಷಣಾ ವ್ಯವಸ್ಥೆ ಇಲ್ಲ | | |
| 5.13 | **ಎಸ್‌ಡಿಎಂಸಿ ಶಾಲಾ ಸಲಹಾ ಪೆಟ್ಟಿಗೆಯ ಉಸ್ತುವಾರಿ ನಡೆಸುವುದು** | | |
| a | ವಾರಕ್ಕೊಂದಾವರ್ತಿ ಶಾಲಾ ಸಲಹಾ ಪೆಟ್ಟಿಗೆಯನ್ನು ತೆರೆದು, ಬಂದಂತಹ ವಿಷಯಗಳನ್ನು ದಾಖಲಿಸಿ, ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯತಂತ್ರವನ್ನು ನಡೆಸುವುದು | | |
| b | 15 ದಿನಕ್ಕೊಂದಾವರ್ತಿ ಶಾಲಾ ಸಲಹಾ ಪೆಟ್ಟಿಗೆಯನ್ನು ತೆರೆದು, ಬಂದಂತಹ ವಿಷಯಗಳನ್ನು ದಾಖಲಿಸಿ, ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯತಂತ್ರವನ್ನು ನಡೆಸುವುದು | | |
| c | ಒಂದು ತಿಂಗಳಿಗೆ ಒಂದು ಬಾರಿ ಶಾಲಾ ಸಲಹಾ ಪೆಟ್ಟಿಗೆಯನ್ನು ತೆರೆದು, ಬಂದಂತಹ ವಿಷಯಗಳನ್ನು ದಾಖಲಿಸಿ, ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯತಂತ್ರವನ್ನು ನಡೆಸುವುದು | | |
| d | ಶಾಲಾ ಸಲಹಾ ಪೆಟ್ಟಿಗೆಯನ್ನು ಶಾಲೆಯಲ್ಲಿ ಇರಿಸಲಾಗಿಲ್ಲ | | |
| 5.14. | **ಶಾಲಾ ಮಕ್ಕಳ ಕಲಿಕಾ ಮಟ್ಟವನ್ನು ಎಸ್‌ಡಿಎಂಸಿಯು ಕ್ರಮಬದ್ಧವಾಗಿ ಉಸ್ತುವಾರಿ ನಡೆಸುತ್ತಿದೆ.** | | |
| a | ಕ್ರಮಬದ್ಧವಾಗಿ ವರ್ಷದಲ್ಲಿ 3 ಬಾರಿ ಮಕ್ಕಳ ಕಲಿಕಾ ಮಟ್ಟವನ್ನು ಪರಿಶೀಲಿಸಿ ಸರಿಯಾದ ಮಾರ್ಗದರ್ಶನ ಹಾಗೂ ಅನುಸರಣೆಯ ಉಸ್ತುವಾರಿ ಮಾಡಲಾಗುವುದು | | |
| b | ವರ್ಷದಲ್ಲಿ 2 ಬಾರಿ ಮಕ್ಕಳ ಕಲಿಕಾ ಮಟ್ಟವನ್ನು ಪರಿಶೀಲಿಸಿ ಅನುಸರಣೆಯ ಉಸ್ತುವಾರಿ ಮಾಡುತ್ತಿರುವುದು | | |
| c | ವರ್ಷದಲ್ಲಿ 1 ಬಾರಿ ಮಕ್ಕಳ ಕಲಿಕಾ ಮಟ್ಟದ ಉಸ್ತುವಾರಿ ಮಾಡುತ್ತಿರುವುದು | | |
| d | ಮಕ್ಕಳ ಕಲಿಕಾ ಮಟ್ಟದ ಉಸ್ತುವಾರಿಯನ್ನು ಮಾಡಲಾಗುತ್ತಿಲ್ಲ | | |
| 5.15 | **ತಮ್ಮ ಶಾಲಾ ಎಸ್.ಡಿ.ಎಂ.ಸಿಯು ಶಾಲೆಗೆ ದಾಖಲಾದ ಎಲ್ಲಾ ಮಕ್ಕಳ ಕಲಿಕೆಯನ್ನು ಖಾತರಿ ಪಡಿಸುವಲ್ಲಿ ಮಕ್ಕಳ ನಿರಂತರ ಹಾಜರಾತಿಯನ್ನು ಖಾತರಿಗೊಳಿಸುತ್ತದೆ.** | | |
| a | ಮಕ್ಕಳ ಹಕ್ಕುಗಳ ರಕ್ಷಣೆಯ ಭಾಗವಾಗಿ ಪೋಷಕರ ವಲಸೆ, ಬಾಲ್ಯವಿವಾಹ, ಬಾಲಕಾರ್ಮಿಕತೆಗೆ ಒಳಗಾಗಿ ಗೈರು ಹಾಜರಿಯಾಗದಂತೆ ಪ್ರತಿ ತಿಂಗಳು ತಮ್ಮ ಮಾಸಿಕ ಸಭೆಯಲ್ಲಿ ಮೇಲ್ವಿಚಾರಣೆ ನಡೆಸುತ್ತಾರೆ. | | |
| b | ಮಕ್ಕಳ ಹಕ್ಕುಗಳ ರಕ್ಷಣೆಯ ಭಾಗವಾಗಿ ಪೋಷಕರ ವಲಸೆ, ಬಾಲ್ಯವಿವಾಹ, ಬಾಲಕಾರ್ಮಿಕತೆಗೆ ಒಳಗಾಗಿ ಗೈರು ಹಾಜರಿಯಾಗದಂತೆ ಪ್ರತಿ 3 ತಿಂಗಳಿಗೊಮ್ಮೆ ತಮ್ಮ ಸಭೆಯಲ್ಲಿ ಮೇಲ್ವಿಚಾರಣೆ ನಡೆಸುತ್ತಾರೆ. | | |
| c | ಮಕ್ಕಳ ಹಕ್ಕುಗಳ ರಕ್ಷಣೆಯ ಭಾಗವಾಗಿ ಪೋಷಕರ ವಲಸೆ, ಬಾಲ್ಯವಿವಾಹ, ಬಾಲಕಾರ್ಮಿಕತೆಗೆ ಒಳಗಾಗಿ ಗೈರು ಹಾಜರಿಯಾಗದಂತೆ ಪ್ರತಿ 6 ತಿಂಗಳಿಗೊಮ್ಮೆ ತಮ್ಮ ಮಾಸಿಕ ಸಭೆಯಲ್ಲಿ ಮೇಲ್ವಿಚಾರಣೆ ನಡೆಸುತ್ತಾರೆ. | | |
| d | ಮಕ್ಕಳ ಹಕ್ಕುಗಳ ರಕ್ಷಣೆಯ ಭಾಗವಾಗಿ ಪೋಷಕರ ವಲಸೆ, ಬಾಲ್ಯವಿವಾಹ, ಬಾಲಕಾರ್ಮಿಕತೆಗೆ ಒಳಗಾಗಿ ಗೈರು ಹಾಜರಿಯಾಗದಂತೆ ಯಾವುದೆ ಕ್ರಮ ಕೈಗೊಂಡಿರುವುದಿಲ್ಲ. | | |

| ಕ್ರ. ಸಂ | ಸೂಚ್ಯಂಕಗಳು ಮತ್ತು ಮಾಪನಾಂಶಗಳು | ಪ್ರತಿಕ್ರಿಯೆ | |
|---|---|---|---|
| | | √ ಗುರುತು ಹಾಕಿ | ವಿವರಣೆ ಅಗತ್ಯವಿದ್ದಲ್ಲಿ |
| 5.16 | **6ರಿಂದ 8 ತರಗತಿಯವರೆಗೆ ವಿಷಯವಾರು ಶಿಕ್ಷಕರ ನೇಮಕಾತಿ** | | |
| a | ವಿಜ್ಞಾನ, ಗಣಿತ ಹಾಗೂ ಸಮಾಜಸಾಸ್ತ್ರ ಶಿಕ್ಷಕರ ಇರುವವರು | | |
| b | ಕೇವಲ 2 ವಿಷಯಗಳ_____ ಮತ್ತು _____ಶಿಕ್ಷಕರು ಇರುವವರು | | |
| c | ಕೇವಲ 1 ವಿಷಯ__________ಶಿಕ್ಷಕರು ಇರುವವರು | | |
| d | ವಿಷಯವಾರು ಶಿಕ್ಷಕರ ನೇಮಕಾತಿ ಆಗಿಲ್ಲ | | |
| 5.17. | **1ರಿಂದ8 ತರಗತಿಯವರೆಗೆ ಭಾಷಾವಾರು ಶಿಕ್ಷಕರ ನೇಮಕಾತಿ** | | |
| a | ಕನ್ನಡ ಇಂಗ್ಲಿಷ್ ಹಿಂದಿ ಭಾಷೆಯ ಶಿಕ್ಷಕರು ಇರುವವರು | | |
| b | ಕೇವಲ 2 ವಿಷಯಗಳ_____ ಮತ್ತು _____ಶಿಕ್ಷಕರು ಇರುವವರು | | |
| c | ಕೇವಲ 1 ವಿಷಯ__________ಶಿಕ್ಷಕರು ಇರುವವರು | | |
| d | ಭಾಷಾವಾರು ಶಿಕ್ಷಕರ ನೇಮಕಾತಿ ಆಗಿಲ್ಲ | | |
| 5.18. | **ತರಗತಿವಾರು ಶಿಕ್ಷಕರ ನೇಮಕಾತಿ ಕನಿಷ್ಟ ಅನುಪಾತ 30 ಮಕ್ಕಳಿಗೆ ಓರ್ವ ಶಿಕ್ಷಕರಂತೆ** | | |
| a | ಎಲ್ಲಾ ತರಗತಿಗಳಿಗೆ ಶಿಕ್ಷಕರು ಇರುವವರು | | |
| b | ಅನುಪಾತ 30 ಮಕ್ಕಳಿಗೆ ಓರ್ವ ಶಿಕ್ಷಕರಂತೆ ಲಭ್ಯವಿರುವವರು | | |
| c | ಅನುಪಾತ 40 ಮಕ್ಕಳಿಗೆ ಓರ್ವ ಶಿಕ್ಷಕರಂತೆ ಲಭ್ಯವಿರುವವರು | | |
| d | ಶಾಲಾ ಮಕ್ಕಳ ಸಂಖ್ಯಾನುಪಾತವಾಗಿ ಶಿಕ್ಷಕರ ಲಭ್ಯತೆ ಇರುವುದಿಲ್ಲ | | |
| 5.19 | **ಎಸ್‌ಡಿಎಂಸಿಯು ಮೇಲಿನ 18 ಸೂಚ್ಯಂಕವನ್ನು ಪರಿಣಾಮಕಾರಿಯಾಗಿ ಸ್ವಮೌಲ್ಯಮಾಪನ ಸೂಚ್ಯಂಕವಾಗಿ ಉಪಯೋಗಿಸುತ್ತಿದ್ದಾರೆ** | | |
| a | ಸರ್ವಸದಸ್ಯರ ಭಾಗವಹಿಸುವಿಕೆಯಲ್ಲಿ ಪ್ರತೀ 6 ತಿಂಗಳಿಗೊಮ್ಮೆ ಎಲ್ಲಾ ಸೂಚ್ಯಂಕಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ. | | |
| b | ಶೇಕಡಾ 50ಕ್ಕಿಂತಲೂ ಹೆಚ್ಚು ಸದಸ್ಯರು ಭಾಗವಹಿಸಿ, ಪ್ರತೀ 6 ತಿಂಗಳಿಗೊಮ್ಮೆ ಎಲ್ಲಾ ಸೂಚ್ಯಂಕಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ. | | |
| c | ಶೇಕಡಾ 50ಕ್ಕಿಂತ ಕಡಿಮೆ  ಸದಸ್ಯರು ಭಾಗವಹಿಸಿ, ಪ್ರತೀ 6 ತಿಂಗಳಿಗೊಮ್ಮೆ ಎಲ್ಲಾ ಸೂಚ್ಯಂಕಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ. | | |
| d | ಕೆಲವೇ ಸದಸ್ಯರು ಭಾಗವಹಿಸಿ, ಪ್ರತೀ 6 ತಿಂಗಳಿಗೊಮ್ಮೆ ಎಲ್ಲಾ ಸೂಚ್ಯಂಕಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತಾರೆ. | | |

**ಹೆಸರು, ಸಹಿ ಮತ್ತು ಸಂಪರ್ಕ ಸಂಖ್ಯೆ: ಮುಖ್ಯೋಪಾದ್ಯಾಯರು**

**ಅಧ್ಯಕ್ಷರು**

**ಸಿ ಆರ್ ಪಿ**